ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ, ಮಾನ್ಯ ಸ್ವಾಮಿರಾವ್ ಅವರು, ಕೃಷಿ ವಿಶ್ವವಿದ್ಯಾನಿಯಲದ ವಿದ್ಯಾರ್ಥಿಗಳು ಕೆಲವು ದಿನಗಳಿಂದ ಸ್ಟ್ರೈಕ್‌ನಲ್ಲಿದ್ದಾರೆ, ಅವರ ಬೇಡಿಕೆಗಳನ್ನು ಸರಕಾರ ಈಡೇರಿಸಬೇಕು, ಎಂದು ಹೇಳಿದರು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುವವರಿಗೆ ಸಂಬಳವನ್ನು ಮೆಡಿಕಲ್ ಗ್ರಾಜುಯೇಟ್ಸ್‌ಗೆ ಸರಿಸಮಾನವಾಗಿ ಕೊಡಬೇಕೆಂದು, ಎರಡನೆಯದಾಗಿ, ಯಾರು ಬಿ.ಎಸ್.ಸಿ., ಕೋ-ಆಪರೇಷನ್, ಸರಿಕಲ್ಚರ್, ಎಂ.ಎಸ್.ಸಿ., ಸರಿಕಲ್ಚರ್ ಮಾಡಿರುತ್ತಾರೋ, ಅವರಿಗೆ ಆಯಾ ಇಲಾಖೆಗಳಲ್ಲಿ ಕೆಲಸ ಕೊಡುವುದಕ್ಕೆ ಆದ್ಯತೆ ಕೊಡಬೇಕೆಂದು ಅವರು ಕೇಳಿದ್ದಾರೆ. ಇದೂ ಅಲ್ಲದೆ ಪಬ್ಲಿಕ್ ಸರ್ವಿಸ್ ಕಮೀಷನ್ ಪರೀಕ್ಷೆಗಳಲ್ಲಿ, ವೃತ್ತಿ ಸಾಯವನ್ನು ಒಂದು ವಿಷಯವನ್ನಾಗಿ ಮಾಡಬೇಕೆಂದು, ಇದಕ್ಕೆ ಒಂದು ನಿಯಮ ಮಾಡಬೇಕೆಂದು ಕೇಳಿದ್ದಾರೆ. ಸಂಬಳದ ವಿಷಯ ಬಿಟ್ಟು ಬಾಕಿ ಬೇಡಿಕೆಗಳನ್ನು ನಾವು ಒಪ್ಪಿಕೊಂಡಿದ್ದೇವೆ. ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೇವೆ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಮುಖಂಡರು ಎರಡು ಸಾರಿ ನನ್ನನ್ನು ಭೇಟಿ ಮಾಡಿದ್ದರು. ನಾನು ಅವರಿಗೆ ಸಮಾಧಾನವಾಗಿ ಉತ್ತರ ಕೊಟ್ಟು ಒಪ್ಪಿಸಿದ್ದೇನೆ. ಸಂಬಳದ ವಿಚಾರದಲ್ಲಿ ಉನ್ನತ ಮಟ್ಟದಲ್ಲಿ ವಿಶೇಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಹೇಳಿದಾಗ, ಅವರು ಆಗಲಿ, ಈ ವಿಚಾರದಲ್ಲಿ ನಾವು ಸದ್ಯಕ್ಕೆ ಪ್ರೆಸ್ ಮಾಡುವುದಿಲ್ಲ, ಸ್ಟ್ರೈಕ್ ಕಾಲ್ ಆಫ್ ಮಾಡುತ್ತೇವೆಂದು ಹೇಳಿದರು ; ಆದರೆ ಇನ್ನೂ ಮಾಡಲಿಲ್ಲ. ನಾನು ತಮ್ಮ ಮೂಲಕ ಅವರು ಯಾರ ಪ್ರಚೋದನೆಗೂ ಒಳಗಾಗದೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಸಂಬಳದ ಒಂದೇ ಒಂದು ವಿಷಯ ಪರಿಶೀಲನೆ ಮಾಡುತ್ತೇವೆಂದು ಹೇಳಿ, ಬಾಕಿ ಬೇಡಿಕೆಗಳನ್ನು ನಾವು ಒಪ್ಪಿಕೊಂಡಿದ್ದೇವೆ. ಅವರ ಬಗ್ಗೆ ಪೋಲೀಸರು ಕ್ರಮ ತೆಗೆದುಕೊಂಡರು. ಹೊಡೆದರು ಎಂದು ಹೇಳಿದರು. ಈ ವಿಚಾರದಲ್ಲಿ ಈಗಾಗಲೇ ಒಬ್ಬ ಸಬ್ ಇನ್‌ಸ್ಪೆಕ್ಟರನ್ನು ನಾವು ಸಸ್ಪೆಂಡ್ ಮಾಡಿದ್ದೇವೆ. ಇದರ ಬಗ್ಗೆ ಮುಂದೆ ತನಿಖೆ ಮಾಡುತ್ತೇವೆ. ಇನ್ನು ಮಾನ್ಯ ಶಿವಮೂರ್ತಿಯವರು ಹೇಳಿದ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಅವರು ವಿವರಗಳನ್ನು ಕಳುಹಿಸಿ ಕೊಟ್ಟರೆ, ದಾಖಲೆಗಳನ್ನು ತರಿಸಿ ನಾನೇ ಪರಿಶೀಲನೆ ಮಾಡಿ ನೋಡುತ್ತೇನೆ.

ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದ ಬಗ್ಗೆ

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ),—ಸನ್ಮಾನ್ಯ ಅಧ್ಯಕ್ಷರೇ, ಶಾಸಕರ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿ ಎಂದು ಮಾಡಿದ್ದಾರೆ. ಆ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗೆ ಬರೀ ಶಾಸಕರು ಸದಸ್ಯರು. ಇದು 1980ರಲ್ಲಿ ರಿಜಿಸ್ಟರ್ ಆಯಿತು. 1980 ರಲ್ಲಿ ರಿಜಿಸ್ಟರ್ ಆಗುವಾಗ ಕೊಟ್ಟಿರತಕ್ಕಂಥ ಅಡ್ರೆಸ್‌ನಲ್ಲಿ ಅದು ಈಗ ಇಲ್ಲ.

ಉಪಾಧ್ಯಕ್ಷರು.—ಇದಕ್ಕೆ ಸರಕಾರ ಏನು ಮಾಡುತ್ತದೆ. ಲೆಜಿಸ್ಲೇಟರ್ಸ್ ಕೋ-ಆಪರೇಟೀವ್ ಹೌಸಿಂಗ್ ಸೊಸೈಟಿ ಶಾಸಕರೇ ರಚಿಸಿರುವ ಸೊಸೈಟಿ, ಕಳೆದ ಹಲವಾರು ವರ್ಷಗಳಿಂದ ಅದರ ಲೆಕ್ಕಪತ್ರಗಳ ತನಿಖೆಯಾಗಿಲ್ಲದಿದ್ದರೆ ಸರಕಾರದವರು ಏನು ಮಾಡುತ್ತಾರೆ.

ಶ್ರೀ ಪಿ. ರಾಮದೇವ್.—ಮಾನ್ಯ ಸಹಕಾರ ಮಂತ್ರಿಗಳಿಗೆ, ಅದರ ಅಕೌಂಟ್ಸ್ ಸೀಜ್ ಮಾಡುವುದಕ್ಕೆ, ಪುಸ್ತಕಗಳನ್ನು ಸೀಜ್ ಮಾಡುವುದಕ್ಕೆ ಅಧಿಕಾರ ಇದೆ. ಈಗ ಅಲ್ಲಿ ಏನು ವ್ಯವಹಾರ ನಡೆದಿದೆ ಎಂದು ಗೊತ್ತಿಲ್ಲ. ನಾನೂ ಒಬ್ಬ ಸದಸ್ಯನಾಗಿದ್ದೇನೆ. ನಾಲ್ಕು ವರ್ಷಗಳಿಂದ ಜನರಲ್ ಬಾಡಿ ಮೀಟಿಂಗ್ ಆಗಿಲ್ಲ. ಅದಕ್ಕಿಂತ ಹೆಚ್ಚಾಗಿ ಅದಕ್ಕೆ ವಿಳಾಸವೇ ಇಲ್ಲ. ನಾನು ಮಾನ್ಯ ಸಹಕಾರ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಿದ್ದೇನೆ.

ಉಪಾಧ್ಯಕ್ಷರು.—ಇಲ್ಲಿಯವರೆಗೆ ಏನಾದರೂ ಕಂಪ್ಲೇಂಟ್ ಕೊಟ್ಟಿದ್ದೀರಾ ? ಹಿಂದೆ ಏನಾದರೂ ಸಹಕಾರ ಸಚಿವರ ಗಮನಕ್ಕೆ ತಂದಿದ್ದೀರಾ ?

ಶ್ರೀ ಪಿ. ರಾಮದೇವ್.—ಈಗ ತರುತ್ತಿದ್ದೇನೆ, ಈ ಬಗ್ಗೆ ಸಹಕಾರ ಮಂತ್ರಿಗಳು ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದೊಂದು ದುರ್ದೈವ. ಶಾಸಕರೇ ನಡೆಸುವ ಸಹಕಾರ ಸಂಘ ಸರಿಯಾಗಿ ನಡೆಯಲಿಲ್ಲ ಎಂದರೆ ದೇವರೇ ಕಾಪಾಡಬೇಕು.

ಶ್ರೀ ಪಿ. ರಾಮದೇವ್.—ಶಾಸಕರ ಹೌಸಿಂಗ್ ಸೊಸೈಟಿಯವರು ಬಿ. ಡಿ. ಎ. ಯಿಂದ, ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಅದನ್ನು ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಶಾಸಕರಿಗಂತೂ ಕೊಟ್ಟಿಲ್ಲ, ನಾನೇ ಪತ್ರ ಬರೆದು ಕೇಳಿದರೆ, ಅದಕ್ಕೆ ಉತ್ತರವೇ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಈಗತಾನೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು, ಲೆಕ್ಕಪತ್ರಗಳನ್ನು ಬರೆದಿದ್ದಾರೋ ಇಲ್ಲವೋ. ಎಂಬ ಬಗ್ಗೆ ನಿಜ ತಿಳಿದುಕೊಂಡು ಎರಡು ಮೂರು ದಿವಸದಲ್ಲಿ ಸದನದ ಗಮನಕ್ಕೆ ತರುತ್ತೇನೆ.

ಕೊಡಗು ಜಿಲ್ಲೆಯ ಕೈಗಾರಿಕಾ ಏರಿಯಾಗಳ ನಿರ್ಮಾಣದ ಬಗ್ಗೆ.

ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).— ಸನ್ಮಾನ್ಯ ಅಧ್ಯಕ್ಷರೇ. ಕೊಡಗು ಜಿಲ್ಲೆ ಕೈಗಾರಿಕೆಯಲ್ಲಿ ಬಹಳ ಹಿಂದುಳಿದ ಪ್ರದೇಶ ಎಂದು ತಮಗೆ ಗೊತ್ತಿದೆ. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಸೋಮವಾರಪೇಟೆ ಮತ್ತು ವೀರಾಜಪೇಟೆ ಎಂಬ ಮೂರು ತಾಲ್ಲೂಕುಗಳು ಇವೆ. ಸೋಮವಾರಪೇಟೆ ಮತ್ತು ವೀರಾಜಪೇಟೆ ತಾಲ್ಲೂಕುಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳು ಎಂದು ಪರಿಗಣಿಸಿ, ಮಡಿಕೇರಿ ತಾಲ್ಲೂಕನ್ನು ಕೈಬಿಟ್ಟಿದ್ದಾರೆ. ಮಡಿಕೇರಿ ತಾಲ್ಲೂಕಿನಲ್ಲಿ ಕೈಗಾರಿಕೆಗಳಿಲ್ಲವಾದ್ದರಿಂದ ಇದನ್ನು ಕೈಗಾರಿಕೆಗಳಲ್ಲಿ ಹಿಂದುಳಿದ ಪ್ರದೇಶ ಎಂದು ಘೋಷಿಸಬೇಕು. ಇವತ್ತು ಅಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅನೇಕ ಕೈಗಾರಿಕೋದ್ಯಮಿಗಳು ಮತ್ತು ಯುವಕರು ಮುಂದೆ ಬಂದಿದ್ದಾರೆ. ಇವರು ಕೈಗಾರಿಕೆಗಳನ್ನು ಸ್ಥಾಪನೆಮಾಡಿದ ನಂತರ ಕಚ್ಚಾಮಾಲುಗಳನ್ನು ಹೊರ ರಾಜ್ಯಗಳಿಂದ ತರಿಸಬೇಕಾದ ಪರಿಸ್ಥಿತಿ ಬಂದಿದೆ. ಇದರ ಬದಲು ಅವರಿಗೆ ಸರ್ಕಾರವೇ ನೇರವಾಗಿ ತರಿಸಿ ವಿತರಣೆ ಮಾಡುವಂತೆ ಕೈಗಾರಿಕಾ ಇಲಾಖೆಗೆ ನಿರ್ದೇಶನ ಕೊಡಬೇಕು. ಮಡಿಕೇರಿಯಲ್ಲಿ ಕೈಗಾರಿಕಾ ಷೆಡ್‌ಗಳನ್ನು ನಿರ್ಮಿಸಿದ್ದಾರೆ. ಸಿ ಆಂಡ್ ಡಿ ಟೈಪ್ ಷೆಡ್ಸ್ ಮಾಡಿದ್ದಾರೆ 2300 ರೂಪಾಯಿಗಳಿಗೆ ಹೈರ್ ಪರ್ಚೇಸ್ ಆಧಾರದ ಮೇಲೆ ಇದನ್ನು ತೆಗೆದುಕೊಳ್ಳಬೇಕೆಂದು ನಿಯಮ ಇದೆ. ತಿಂಗಳಿಗೆ 2300 ರೂಪಾಯಿಗಳನ್ನು ಕಟ್ಟಲು ಕಷ್ಟವಾಗುತ್ತದೆ. ಆದಕಾರಣ ಸಿ ಟೈಪ್‌ಗೆ ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಮಾಡಿ, ಡಿ ಟೈಪ್‌ಗೆ 500 ರೂಪಾಯಿಗಳನ್ನು ಮಾಡಬೇಕು. ಅವಧಿಯನ್ನು ಸಹ 120 ತಿಂಗಳ ಬದಲು 200 ತಿಂಗಳು ಎಂದುಮಾಡಿ ಕೈಗಾರಿಕೆಗಳು ನಮ್ಮ ಜಿಲ್ಲೆಯಲ್ಲಿ ಬೆಳೆಯಲು ಅಸ್ಪದ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ನಾಣಯ್ಯನವರು ತಪ್ಪು ತಿಳಿದುಕೊಳ್ಳದೇ ಹೋದರೆ, ಒಂದು ವಿಚಾರವನ್ನು ಹೇಳುತ್ತೇನೆ. ಈ ವಿಚಾರವನ್ನು ಕೈಗಾರಿಕಾ ಮಂತ್ರಿಗಳಲ್ಲಿ ಹೇಳಿ ಪರಿಹಾರ ಕಂಡುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಆಗಲಿ ನನ್ನ ಹತ್ತಿರ ಬನ್ನಿ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಬಿರುಗಾಳಿಯಿಂದ ಉಂಟಾದ ನಷ್ಟ.

ಶ್ರೀ ಕಿ. ವಸಂತಬುಂಗೇರಾ (ಬೆಳ್ತಂಗಡಿ).— ಮಾನ್ಯ ಅಧ್ಯಕ್ಷರೇ. ಬೆಳ್ತಂಗಡಿ ತಾಲ್ಲೂಕಿನ ಇಂದಬೆಟ್ಟು, ಕಡಿಬೆಟ್ಟಾವರ ಗ್ರಾಮಗಳಲ್ಲಿನ ಜಮೀನುಗಳು ಇತ್ತೀಚೆಗೆ ಪ್ರಕೃತಿ ವಿಕೋಪಕ್ಕೆ ಅಂದರೆ ಬಿರುಗಾಳಿಗೆ ಸಿಕ್ಕಿ, 15 ಲಕ್ಷ ರೂಪಾಯಿಗಳ ಬಾಳೆ ಕೃಷಿ ಸಂಪೂರ್ಣವಾಗಿ ನಾಶವಾಗಿದೆ. ಈ ಬಗ್ಗೆ ಪರಿಹಾರ ಕೊಡಬೇಕೆಂದು ಮಾನ್ಯ ಮಂತ್ರಿಯವರಿಗೆ ಮನವಿ ಸಲ್ಲಿಸಲಾಗಿದೆ. ಅಲ್ಲಿನ ರೈತರು ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಸಂಘಗಳ ಮೂಲಕ ಸಾಲಗಳನ್ನು ಪಡೆದು ಬಾಳೆಯನ್ನು ಬೆಳೆಸಿದ್ದರು. ಅದರ ಬಡ್ಡಿಯನ್ನು ಕೂಡಾ ಇವತ್ತು ಕೊಡುವುದಕ್ಕೆ ಅವರಿಗೆ ಆಗುವುದಿಲ್ಲ. ಇದರ ಬಗ್ಗೆ ತಹಸೀಲ್ದಾರರೂ ಜಿಲ್ಲಾಧಿಕಾರಿಗಳ ಮುಖಾಂತರ ಒಂದು ರಿಪೋರ್ಟ್ ಕಳುಹಿಸಿದ್ದಾರೆ. ಬಡವರ ಕಣ್ಣೀರು ಒರೆಸುವ ಕಾರ್ಯವನ್ನು ತಕ್ಷಣ ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶು ಸಂಗೋಪನೆ ಮತ್ತು ತೋಟಗಾರಿಕೆ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ. ಮಾನ್ಯ ವಸಂತ ಬಂಗೇರಾರವರು, ಎರಡು ಗ್ರಾಮಗಳಲ್ಲಿ ಪ್ರಕೃತಿ ವಿಕೋಪದಿಂದ ಬಾಳೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಇಲಾಖೆಗೆ ಯಾವ ವರದಿಯೂ ಬಂದಿಲ್ಲ. ನಾನು ತೀವ್ರವಾಗಿ ವರದಿಯನ್ನು ತರಿಸಿಕೊಂಡು ನಿಯಮಗಳಿಗೆ ಅನುಸಾರವಾಗಿ ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇನೆ.

ಉಪಾಧ್ಯಕ್ಷರು.— ಮಾನ್ಯ ನಾಯಕ್‌ರವರೇ, ತಾವು ಕಳುಹಿಸಿರತಕ್ಕ ವಿಷಯ ವೈಯುಕ್ತಿಕ ವಿಷಯಕ್ಕೆ ಸಂಬಂಧಪಟ್ಟದ್ದು. ಅದನ್ನು ಈ ತರಹ ತರಬಾರದು. ತಾವು ತಂದಿದ್ದೀರಿ. ಸಂಕ್ಷೇಪವಾಗಿ ಹೇಳಿಬಿಡಿ.

ಪಶು ವೈದ್ಯಕೀಯ ಕಾಲೇಜಿನಲ್ಲಿ ಒಬ್ಬ ವಿದ್ಯಾರ್ಥಿಯ ಸಸ್ಪೆಂಡ್.

ಶ್ರೀ ರಾಮನಾರಾಯಣ ನಾಯಕ್ (ಭಟ್ಕಳ್).—ಮಾನ್ಯ ಅಧ್ಯಕ್ಷರೇ, ಕೃಷಿ ವಿಶ್ವವಿದ್ಯಾನಿಲಯದ ಅಂಕಿಗೆ ಒಳಪಟ್ಟ ಪಶುವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿರುವ ರಾಘವೇಂದ್ರ ಹೆಗ್ಗಡೆ ಎಂಬ ವಿದ್ಯಾರ್ಥಿ